# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ಸಂ:ಬಿಬಿಎಂಪಿ/ಸಕಾಅ/ಹೂಉವಿ/ 60/2022-23 ದಿನಾಂಕ:17.09.2022

**-:ದಿನಾಂಕ:17.09.2022 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:17.09.2022 ರ ಶನಿವಾರ ಬೆಳಗ್ಗೆ 11.00 ಕ್ಕೆ ವಾರ್ಡ್ ನಂ.105 ಬೆಳತ್ತೂರು ಮತ್ತು ವಾರ್ಡ್ ನಂ.106 ಹೂಡಿ, ಹೂಡಿ ಕಾಮಗಾರಿ ಕಛೇರಿಯಲ್ಲಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:-**

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀ.ಶ್ರೀನಿವಾಸ್ ಮೂರ್ತಿ. | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು ಹಾಗೂ ಸ.ಕಾ.ಅ. ಹೂಡಿ ಉಪವಿಭಾಗ | ಹಾಜರಿದ್ದರು. |
| 2. | ಶ್ರೀ.ಎಂ.ಜಗದೀಶ್ | ಕಾರ್ಯದರ್ಶಿಗಳು ವಾರ್ಡ್ ಎ.ಇ. ವಾರ್ಡ್.ನಂ-54 | ಹಾಜರಿದ್ದರು. |
| 3 | ಶ್ರೀ.ಶ್ರೀನಿವಾಸಯ್ಯ | ಪಿ.ಎಸ್.ಐ. ಕೆ.ಆರ್.ಪುರಂ | ಹಾಜರಿದ್ದರು. |
| 4 | ಶ್ರೀ.ಚಂದ್ರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು ಭೈರತಿ ಹೂಡಿ-54 | ಹಾಜರಿದ್ದರು. |
| 5 | ಶ್ರೀ.ವೀರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು, | ಹಾಜರಿದ್ದರು. |
| 6 | ಶ್ರೀ.ಸಂಂಗಿರಾಮಯ್ಯ | ಜೆಇ.ಬೆಸ್ಕಾಂ | ಹಾಜರಿದ್ದರು. |
| 7 | ಶ್ರೀ.ನಟರಾಜ್ | ಎಆರ್‌ಓ | ಹಾಜರಿದ್ದರು. |
| 8 | ಶ್ರೀ.ಮಹೇಂದ್ರ ಪ್ರಸಾದ್ | ಕೊಡಿಗೇಹಳ್ಳಿ | ಹಾಜರಿದ್ದರು. |
| 9 | ಶ್ರೀ.ರಾಮು | ಜೆ.ಐ. ವಾರ್ಡ್-54 | ಹಾಜರಿದ್ದರು. |
| 10 | ಶ್ರೀಮತಿ.ರೂಪ.ಕೆ.ಪಿ | CRP Hoodi ಶಿಕ್ಷಣ ಇಲಾಖೆ | ಹಾಜರಿದ್ದರು. |
| | ಶ್ರೀಮತಿ.ನರಸಮ್ಮ (ನಳಿನಿ) | SWM Sup. | ಹಾಜರಿದ್ದರು. |
| 11 | ಶ್ರೀ.ಯೋಗೇಶ್.ಎನ್ | ಸಿ.ಆರ್.ಪಿ. ಬೆಳತ್ತೂರು ಶಿಕ್ಷಣ ಇಲಾಖೆ | ಹಾಜರಿದ್ದರು. |
| 12 | ಶ್ರೀಮತಿ. ಪ್ರೇಮಾ | ಕಲ್ಯಾಣ ಇಲಾಖೆ ಮಹದೇವಪುರ | ಹಾಜರಿದ್ದರು. |
| | ಶ್ರೀ. | ಮಾರ್ಶಲ್ | ಹಾಜರಿದ್ದರು. |
| 13 | ಶ್ರೀ.ಮಾದೇಶ್ | ಸಾರ್ವಜನಿಕರು | ಹಾಜರಿದ್ದರು. |
| 14 | ಶ್ರೀ.ಶಶಿಕುಮಾರ್ | ಸಾರ್ವಜನಿಕರು | ಹಾಜರಿದ್ದರು. |
| 15 | ಶ್ರೀ.ನಾಗೇಶ್ | ಸಾರ್ವಜನಿಕರು | ಹಾಜರಿದ್ದರು. |
| 16 | ಶ್ರೀ.ಶಂಕರ್ | ಸಾರ್ವಜನಿಕರು | ಹಾಜರಿದ್ದರು. |
| 17 | ಶ್ರೀ.ಮಂಜುನಾಥ್.ವಿ | ಸಾರ್ವಜನಿಕರು | ಹಾಜರಿದ್ದರು. |
| 18 | ಶ್ರೀ.ಅಶ್ವತ್ಥಪ್ಪ | ಸಾರ್ವಜನಿಕರು | ಹಾಜರಿದ್ದರು. |
| 19 | ಶ್ರೀ.ಮಧು.ಎಂ | ಸಾರ್ವಜನಿಕರು | ಹಾಜರಿದ್ದರು. |
| 20 | ಶ್ರೀ.ಜಿ,ಎಸ್.ರೆಡ್ಡಿ | ಸಾರ್ವಜನಿಕರು | ಹಾಜರಿದ್ದರು. |
| 21 | ಶ್ರೀ.ಶಿವಾನಂದ | ಸಾರ್ವಜನಿಕರು | ಹಾಜರಿದ್ದರು. |

Scanned with CamScanner

| | | | |
|---|---|---|---|
| 22 | ಶ್ರೀ.ಕೆ.ಅನಂತಕುಮಾರ್ | ಸಾರ್ವಜನಿಕರು | ಹಾಜರಿದ್ದರು. |
| 23 | ಶ್ರೀ.ಎಚ್.ಆರ್.ಶ್ರೀನಿವಾಸ್ ರೆಡ್ಡಿ | ಸಾರ್ವಜನಿಕರು | ಹಾಜರಿದ್ದರು. |
| 24 | ಶ್ರೀಮತಿ.ಎಚ್.ಎಸ್. ನರೇಂದ್ರ ಕುಮಾರ್ | ಸಾರ್ವಜನಿಕರು | ಹಾಜರಿದ್ದರು. |

**ಸಭೆಯ ನಡುವಳಿಗಳು:-**

- ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ-54 ರವರು ಸಭೆಗೆ ಬಂದಿರುವ ವಾರ್ಡ್ ಸದಸ್ಯರಿಗೆ, ಅಧಿಕಾರಿ/ನೌಕರರುಗಳಿಗೆ ಸ್ವಾಗತಾ ಕೋರಿಸಭೆ ನಡೆಸಿಕೊಡುವಂತೆ ಕೊರಿದರು.
- ಅಧ್ಯಕ್ಷರು ಈ ಹಿಂದೆ ನಡೆದ ವಾರ್ಡ್ ಸಮಿತಿ ಸಭೆಯಲ್ಲಿ ತಿರ್ಮಾನಗಳನ್ನು ಕೈಗೊಂಡಿರುವ ಬಗ್ಗೆ ಅಧಿಕಾರಿ/ನೌಕರರು ಚರ್ಚಿಸಲಾಯಿತ್ತು ಹಾಗೂ ಕ್ರಮವಹಿಸಲು ಸೂಚಿಸಲಾಯಿತ್ತು.
- ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು ಹಾಗೂ ಮುಂದಿನ ಸಭೆಯಲ್ಲಿ ಗೈರುಹಾಜರಾದಲ್ಲಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದು ಎಂದು ತಿಳಿಸಿದರು.

**ಪೋಲೀಸ್ ಇಲಾಖೆ**

1) ಶಂಕರ್ ರವರು ಬಿಳೆಶೀವಾಲೆಯ ಮುಖ್ಯ ರಸ್ತೆಯಲ್ಲಿ ಟ್ರಾಫೀಕ್‌ಜಾಮ್ ಆಗುತ್ತಿದ್ದು ಇದಕ್ಕೆ ಕಾರಣ ಅಂಗಡಿಗಳ ಮುಂದೆ ಸಾರ್ವಜನಿಕರು ಗಾಡಿಗಳನ್ನು ಪಾರ್ಕ್ ಮಾಡಿ ಹೋಗುವುದರಿಂದ ಟ್ರಾಫೀಕ್‌ಜಾಮ್ ಆಗುತ್ತಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.
2) ಮಂಜುನಾಥ್ ಅಯ್ಯಪ್ಪನಗರ ರವರು ಅಯ್ಯಪ್ಪನಗರ ಮುಖ್ಯ ರಸ್ತೆಯಲ್ಲಿ ತುಂಬಾ ಟ್ರಾಫೀಕ್‌ಜಾಮ್ ಆಗುತ್ತಿರುತ್ತದೆ ಆದ್ದರಿಂದ ಟ್ರಾಫೀಕ್ ಪೋಲಿಸ್‌ರನ್ನು ನಿಯೋಜಿಸಿ ಟ್ರಾಫೀಕ್‌ಜಾಮ್ ತೆರವುಗೊಳಿಸಬೇಕೆಂದು ಸಭೆಯಲ್ಲಿ ತಿಳಿಸಿದರು.
3) ಬೆಳತ್ತೂರು ನಾಗೇಶ್ ರವರು ಬೆಳತ್ತೂರು ಮುಖ್ಯ ರಸ್ತೆಯಲ್ಲಿ ಟ್ರಾಫೀಕ್‌ಜಾಮ್ ಆಗುತ್ತಿದ್ದು ಹಾಗೂ ಬೆಸ್ಕಾಂ ಕಂಬ ಇರುತ್ತದೆ ಆದ್ದರಿಂದ ಅವುಗಳನ್ನು ತೆಗೆದುಹಾಕಬೇಕೆಂದು ಸಭೆಯಲ್ಲಿ ತಿಳಿಸಿದರು ಹಾಗೂ ಅದರಿಂದ ಟ್ರಾಫೀಕ್‌ಜಾಮ್ ತುಂಬಾ ಕಡಿಮೆ ಆಗುತ್ತದೆ ಎಂದು ನಾಗೇಶ್ ರವರು ತಿಳಿಸಿದರು.
4) ಕೊಡಿಗೇಹಳ್ಳಿ ಪ್ರಸಾದ್ ರವರು ಕೋಕೋನೆಟ್ ಗಾರ್ಡನ್ ಮುಂದೆ ತುಂಬಾ ಟ್ರಾಫೀಕ್‌ಜಾಮ್ ಆಗುತ್ತಿರುತ್ತದೆ ಅದನ್ನು ತೆರವುಗೊಳಿಸಲು ಸಭೆಯಲ್ಲಿ ತಿಳಿಸಿದರು.
5) ನಳಿನಿ ರವರು ತಿಗಳರಪಾಳ್ಯ ಮುಖ್ಯ ರಸ್ತೆಯಲ್ಲಿ ಕಂಬಗಳು ಇರುವುದರಿಂದ ಟ್ರಾಫೀಕ್‌ಜಾಮ್ ಆಗುತ್ತಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

**ಕ್ರಂ.ಸಂ 1 ರಿಂದ 5ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಟ್ರಾಫಿಕ್/ಪೋಲೀಸ್ ಇಲಾಖೆ)**

Scanned with CamScanner

ಪಾಲಿಕೆ ಇಲಾಖೆ

1) ಅಯ್ಯಪ್ಪನಗರ ನಿವಾಸಿಗಳು 4ತಹ ಬ್ಲಾಕ್, ಗಂಗೋತ್ರಿ ಲೇಔಟ್‌ನಲ್ಲಿ ಡ್ರೈನ್ ತುಂಬಾ ಬ್ಲಾಕ್ ಆಗಿ ಇರುವುದರಿಂದ ನೀರು ಮುಂದೆ ಹರಿಯಲು ಸಾಧ್ಯವಾಗದೆ ರಸ್ತೆಯ ಮೇಲೆ ತುಂಬಿ ಹರಿಯುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.
2) ಕೊಡಿಗೇಹಳ್ಳಿ ಪ್ರಸಾದ್ ನವರು ಕೋಡಿಗೇಹಳ್ಳಿ ಯಿಂದ ಅಯ್ಯಪ್ಪನಗರ ಮುಖ್ಯ ರಸ್ತೆಯಲ್ಲಿ ಗುಂಡಿ ಅಗದಿರುತ್ತದೆ ಆದ್ದರಿಂದ ಗುಂಡಿಗಳನ್ನು ಮುಚ್ಚಬೇಕೆಂದು ಸಭೆಯಲ್ಲಿ ತಿಳಿಸಿದರು.
3) ಕೊಡಿಗೇಹಳ್ಳಿ ವಿವೇಕ್ ರವರು ಸರ್ವೆ.52, 45 ಮತ್ತು 46 ರಲ್ಲಿ ರಾಜಕಾಲುವೆಯಲ್ಲಿ ನೀರು ತುಂಬಿ ಬರುತ್ತದೆ ಹಾಗೂ ನೀರು ಮುಂದೆ ಹರಿಯಲು ಸರಿಯಾದ ವ್ಯವಸ್ಥೆ ಇರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು.
4) ಹೂಡಿ ಬಾಬು ರವರು ತಿಳಿಸಿದಂತೆ ಹೂಡಿ ಮುಖ್ಯರಸ್ತೆಯಲ್ಲಿ ಡ್ರೈನ್‌ಗಳು ತುಂಬಿ ನೀರು ರಸ್ತೆ ಮೇಲೆ ಬರುತ್ತದೆ ಆದ್ದರಿಂದ ಮಳೆ ನೀರು ರಸ್ತೆಯಲ್ಲಿ ನಿಂತಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.
5) ಬೆಳತ್ತೂರು ನಾಗೇಶ್ ರವರು ತಿಳಿಸಿದಂತೆ ವಾರ್ಡ್‌ಗಳ ರಸ್ತೆಯಲ್ಲಿ ಮಳೆಯಿಂದ ಗುಂಡಿ ಬಿದ್ದಿರುತ್ತದೆ ಅದನ್ನು ಮುಚ್ಚಲು ಸಭೆಯಲ್ಲಿ ತಿಳಿಸಿದರು.

**ಕ್ರಂ.ಸಂ 1ರಿಂದ 5 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸಕಾಅ/ಸಅ/ಬಿಬಿಎಂಪಿ/ಮೇಜರ್ ರೋಡ್**

**ಬಿ.ಡಬ್ಲ್ಯೂ.ಎಸ್,ಎಸ್.ಬಿ(BWSSB):-**

1) ಅಯ್ಯಪ್ಪನಗರ ಮಂಜುನಾಥನವರು ಅಯ್ಯಪ್ಪನಗರ 1ನೇ ಬ್ಲಾಕ್‌ನಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ನವರು ರಸ್ತೆ ಅಗೆದು ರಸ್ತೆಗಳು ತುಂಬಾ ಸಮಸ್ಯೆಯಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.
2) ಬೆಳತ್ತೂರು ನಾಗೇಶ್ ರವರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಡ್ರೈನ್‌ಗಳಲ್ಲಿ ನೀರು ಮುಂದೆ ಸರಿಯಾಗಿ ಹರಿಯುತ್ತಿಲ್ಲ ಎಂದು ತಿಳಿಸಿದರು.
3) ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಅಧ್ಯಕ್ಷರು ತಿಳಿಸಿದಂತೆ ಡ್ರೈನೇಜ್ ಬ್ಲಾಕ್‌ಗಳನ್ನು ಸರಿಪಡಿಸಬೇಕೆಂದು ತಿಳಿಸಿದರು.
4) ಬೆಳತ್ತೂರು ಕೀರ್ತಿ ಅಪಾರ್ಟ್‌ಮೆಂಟ್ ಯಿಂದ ಆನಂದ ನವರು 3 ನೇ ರೋಡ್‌ನಲ್ಲಿ ಪಾರ್ಕ್ ಇನ್ನೂ ಆಗಿಲ್ಲ ಎಂದು ತಿಳಿಸಿದರು.

**ಕ್ರಂ.ಸಂ 1ರಿಂದ 4 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸ.ಕಾ.ಅ./ಸ.ಅ/ಬಿ.ಡಬ್ಲ್ಯೂ.ಎಸ್,ಎಸ್.ಬಿ).**

**ಬೀದಿ ದೀಪ ಹಾಗೂ ಬೆಸ್ಕಾಂ**

1) ಬೆಳತ್ತೂರು ನಾಗೇಶ್ ನವರು ಬೆಳತ್ತೂರು ಪಿ.ಎನ್.ಸಿ ಶಾಲೆ ರಸ್ತೆಯಲ್ಲಿ ಸ್ಟ್ರೀಟ್ ಲೈಟ್ ಉರಿಯುತ್ತಿಲ್ಲ ಹಾಗೂ ಹೊಸ ಲೈಟ್‌ಗಳು ಇನ್ನೂ ಹಾಕಿರುವುದಿಲ್ಲ ಹಾಗೂ ಬೆಳತ್ತೂರು ಗ್ರಾಮದಲ್ಲಿ ಸರಿಯಾಗಿ ಲೈಟ್‌ಗಳು ಬರುತ್ತಿಲ್ಲವೆಂದು ತಿಳಿಸಿದರು.
2) ಅಯ್ಯನಗರ ಮಂಜುನಾಥ ನವರು ಅಯ್ಯಪ್ಪನಗರದಲ್ಲಿ ರಾತ್ರಿ 9 ಗಂಟೆಗೆ ಕರೆಂಟ್ ಹೋದ್ರೆ ಮತ್ತೆ ಬೆಳಗ್ಗೆ 9.00 ಗಂಟೆಗೆ ಮೇಲೆ ಬಂದು ರಿಪೇರಿ ಮಾಡುತ್ತಾರೆ ಎಂದು ತೀಲಿಸಿದರು.

Scanned with CamScanner

ಕ್ರ.ಸಂ 1 ರಿಂದ 2ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.
(ಕ್ರಮ:- ಸ.ಕಾ.ಅ./ಸ.ಅ/ಬೆಸ್ಕಾಂ)

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

ಮುಂಜಾಗ್ರತಾ ಕ್ರಮವಾಗಿ ಸಭೆ ಸಮಾರಂಬ ಮಾಡದಂತೆ ತಿಳಿಸಲಾಯಿತ್ತು ಹಾಗೂ ವ್ಯಾಕ್ಸಿನ್‌ನೇಶನ್ ಹಾಕಿಸಲು ಸ್ಥಳಿಯರಿಗೆ ಮುಂಜಾಗ್ರತೆ ವಹಿಸಿ ಕ್ರಮಕೈಗೊಳ್ಳಲು ತಿಳಿಸಿದರು.

Covid-19, ವ್ಯಾಕ್ಸಿನೇಷನ್, Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ನೋಡಲ್ ಅಧಿಕಾರಿ ಹಾಗೂ
ಸ.ಕಾ.ಅ. ಹೂಡಿ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ–54 ಹೂಡಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ

Scanned with CamScanner